OS No.95/2018 PW-**2**

**ದಿನಾಂಕ 02.12.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿಯವರ ಪರ ಶ್ರೀ ಕೆ ಟಿ ಟಿ ವಕೀಲರಿಂದಃ**

ಹೊನ್ನಪ್ಪ ನನ್ನ ಬೀಗರು. 2 ನೇ ವಾದಿಯ ತಮ್ಮನಿಗೆ ನನ್ನ ಮಗಳನ್ನು ಮದುವೆ ಮಾಡಿಕೊಟ್ಟಿರುತ್ತೇನೆ. ವಾದಿಯವರಿಗೆ 1 ನೇ ಪ್ರತಿವಾದಿ ರಾಜು ಗೊತ್ತಿಲ್ಲ. ಸದರಿ ರಾಜು ನಮ್ಮ ಊರಿನವರು. ನನಗೆ ರಾಜುರವರ ಅಣ್ಣ ತಮ್ಮಂದಿರು ಎಲ್ಲಾ ಗೊತ್ತು ಆದರೆ ಅವರು ನಮ್ಮ ಸಂಬಂಧಿಕರಲ್ಲ. ನನಗೆ ಕರೀಗೌಡರವರ ಕುಟುಂಬದ ಜಮೀನುಗಳು ಎಲ್ಲೆಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಆದರೆ ಒಂದೇ ಒಂದು ಜಮೀನು 1 ನೇ ಪ್ರತಿ ವಾದಿ ತೋರಿಸಿದ ಜಮೀನು ಗೊತ್ತು. 1 ನೇ ಪ್ರತಿವಾದಿಗೆ 3 ಕಡೆ ಆಸ್ತಿ ಇದೆ ಎಂದು ಹೇಳಿದ್ದರು ನಾನು 2 ಆಸ್ತಿಗಳನ್ನು ನೋಡಿರುತ್ತೇನೆ. 1 ನೇ ಪ್ರತಿವಾದಿ ರಾಜುರವರಿಗೆ ಊರಿನಲ್ಲಿ ಯಾವುದೇ ಮನೆಗಳು ಇಲ್ಲ ಎಂದರೆ ಸಾಕ್ಷಿ ಇವೆ ಅವುಗಳನ್ನು ಬೇರೆಯವರಿಗೆ ಪರಭಾರೆ ಮಾಡಿ ಬೇರೆ ಮನೆಯನ್ನು ಹೊಸದಾಗಿ ಕಟ್ಟಿಕೊಂಡಿರುತ್ತಾರೆ. 1 ನೇ ಪ್ರತಿವಾದಿಯವರು ಈಗ ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿರುತ್ತಾರೆ ಅವರು ಕೆಲಸಕ್ಕೆ ಸೇರಿದ ದಿನದಿಂದ ಅಂದರೆ 30-32 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿರುತ್ತಾರೆ. 1 ನೇ ಪ್ರತಿವಾದಿಯವರು ಜಮೀನನ್ನು ಮಾರಾಟ ಮಾಡುತ್ತೇನೆಂದು ನನ್ನ ಬಳಿ ಹೇಳಿರುತ್ತಾರೆ ನಾನು ಮತ್ತು 1 ನೇ ಪ್ರತಿವಾದಿ ತುಂಬಾ ಆತ್ಮೀಯರು. ನನ್ನನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಜಮೀನನ್ನು ಮಾರಾಟ ಮಾಡುತ್ತೇನೆಂದು ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯವರ ವಿಳಾಸದಿಂದ ಅಂದರೆ ನಾಗೇಗೌಡನ ಪಾಳ್ಯದಿಂದ ದಾವಾ ಸ್ವತ್ತಿಗೆ 45 ಕಿ. ಮೀ ಅಂತರವಿದೆ. ವಾದಿಯವರಿಗೆ ಬೇರೆ ಯಾವುದೇ ಸ್ವತ್ತುಗಳು ಇಲ್ಲ. 1 ನೇ ಪ್ರತಿವಾದಿ ರಾಜುರವರು ಮಾರಾಟ ಮಾಡಲು ಇಟ್ಟ ಜಮೀನನ್ನು ನಾನು ಹತ್ತಾರು ವರ್ಷಗಳಿಂದ ನೋಡಿರುತ್ತೇನೆ. ಸದರಿ

ಜಮೀನು ಊರಿನ ಹತ್ತಿರ ಅಂದರೆ ಅರ್ಧ ಕಿ. ಮೀ ಒಳಗೆ ಬರುತ್ತದೆ. ನನ್ನ ಬೀಗರಿಗೆ ಜಮೀನನ್ನು ನಾನೇ ತೋರಿಸಿರುತ್ತೇನೆ. ನಾನು ಜಮೀನನ್ನು ತೋರಿಸಿದ ಸಮಯದಲ್ಲಿ 1 ನೇ ಪ್ರತಿವಾದಿಯ ಅಣ್ಣ ತಮ್ಮಂದಿರು ಇರಲಿಲ್ಲ. 1 ನೇ ಪ್ರತಿವಾದಿಯವರು ಜಮೀನನ್ನು ಮಾರಾಟ ಮಾಡುತ್ತೇನೆಂದು ಹೇಳಿದ ಸಮಯದಲ್ಲಿ ಸದರಿ ಜಮೀನಿನ ದಾಖಲೆಗಳನ್ನು ನನಗೆ ತೋರಿಸಿರುತ್ತಾರೆ ಆದರೆ ಅವುಗಳನ್ನು ನಾನು ಮುಂಚಿತವಾಗಿ ಪಡೆದುಕೊಂಡಿಲ್ಲ. ಸದರಿ ಜಮೀನನ್ನು ನೋಡಿದ ನಂತರ ವಾದಿಗಳು ಒಪ್ಪಿಗೆ ಸೂಚಿಸಿದ ಮೇಲೆ ವ್ಯಾಪಾರಕ್ಕೆ ಹೋಗಿರುತ್ತೇನೆ. ಆ ರೀತಿ ಜಮೀನಿಗೆ ಹೋಗುವ ಮೊದಲು 1 ನೇ ಪ್ರತಿವಾದಿಯೇ ನನಗೆ ಕರೆ ಮಾಡಿ ಹೇಳಿದ ನಂತರ ನಾವು ವ್ಯಾಪಾರಕ್ಕಾಗಿ ಅವರ ಮನೆಗೆ ಹೋಗಿರುತ್ತೇವೆ. ಆ ಸಮಯದಲ್ಲಿ 1 ನೇ ಪ್ರತಿವಾದಿಯ ಅಣ್ಣ ತಮ್ಮಂದಿರು ಯಾರು ಬಂದಿರಲಿಲ್ಲ. ಅವರ ಮನೆಗೆ ಬೆಳಗ್ಗೆ 10.00 ಗಂಟೆಗೆ ಹೋಗಿರುತ್ತೇವೆ. ಸದರಿ ಜಮೀನಿನ ಬಗ್ಗೆ ವ್ಯಾಪಾರ ಆಗುವಾಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ಸದರಿ ಜಮೀನಿನ ಬಗ್ಗೆ ವ್ಯಾಪಾರ ಆಗುವ ಸಮಯದಲ್ಲಿ 1 ನೇ ಪ್ರತಿವಾದಿಯ ಮನೆಯಲ್ಲಿ 1 ನೇ ಪ್ರತಿವಾದಿ, ಅವರ ಹೆಂಡತಿ ಮತ್ತು 1 ನೇ ಪ್ರತಿವಾದಿಯ ಭಾಮೈದ ಇದ್ದರು.

2. 1 ನೇ ಪ್ರತಿವಾದಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಆದರೆ ಸದರಿ ಹೆಣ್ಣು ಮಕ್ಕಳು ವ್ಯಾಪಾರದ ದಿನ ಇರಲಿಲ್ಲ. ಆ ಸಮಯದಲ್ಲಿ ಹಿರಿ ಮಗಳಿಗೆ ಮದುವೆಯಾಗಿತ್ತು, ಕಿರಿಯ ಮಗಳು ವಿದ್ಯಾಭ್ಯಾಸ ಮಾಡುತ್ತಿದ್ದಳು. ವ್ಯಾಪಾರ ಮುಗಿದ ನಂತರ ಅಗ್ರಿಮೆಂಟ್ ಮಾಡಿಸಿಕೊಳ್ಳುತ್ತೇವೆಂದು ಹೇಳಿ 10 ಸಾವಿರ ಮುಂಗಡ ಹಣ ಕೊಟ್ಟು ಮನೆಗೆ ಹೋಗಿರುತ್ತೇವೆ. ವ್ಯಾಪಾರ ಆದ ದಿನ ಯಾವುದೇ ಕರಾರು ಪತ್ರ ಮಾಡಿಕೊಂಡಿಲ್ಲ ಸದರಿ ಜಮೀನಿನ ವ್ಯಾಪಾರ ಯಾವ ದಿನಾಂಕದಂದು ಆಯಿತು ಎಂದು ನೆನಪಿಲ್ಲ. ಕರಾರು ಪತ್ರ ದಿ:10.06.2018 ರಂದು ಆಗಿರುತ್ತದೆ. ಸದರಿ ಕರಾರು ಪತ್ರವಾಗುವಾಗ 1 ನೇ ಪ್ರತಿವಾದಿಯ ಮಕ್ಕಳು ಹಾಜರು ಇರಲಿಲ್ಲ. ಸದರಿ ಕರಾರು ಪತ್ರವಾಗುವಾಗ 1 ನೇ ಪ್ರತಿವಾದಿಯ ಭಾಮೈದ ಹಾಜರಿದ್ದರು. 1 ನೇ ಪ್ರತಿವಾದಿಯ ಮನೆಯಲ್ಲಿ ಕರಾರು ಪತ್ರ ಆಗಿರುತ್ತದೆ ಸದರಿ ಕ್ರಯದ ಕರಾರನ್ನು 2 ನೇ ವಾದಿ ತಯಾರು ಮಾಡಿಕೊಂಡು ಬಂದಿದ್ದರು. ಸದರಿ ಕ್ರಯದ ಕರಾರು

ಆಗುವಾಗ ಬೆಳಗ್ಗೆ 10.00-12.00 ಗಂಟೆಯವರೆಗೆ ಆಗಿರುತ್ತದೆ. ಸದರಿ ಕರಾರು ಪತ್ರ ಆದ ನಂತರ ನಾನು ನನ್ನ ಊರಿಗೆ ಬಂದಿರುತ್ತೇನೆ. ನನ್ನ ಅಳಿಯರವರು ಕರಾರು ಪತ್ರವನ್ನು ಎಲ್ಲಿ ಮಾಡಿಸಿಕೊಂಡು ಬಂದಿರುತ್ತಾರೆಂದು ಕೇಳಿಲ್ಲ ಸದರಿ ದಿನ ನಾವೆಲ್ಲರೂ ವಕೀಲರ ಕಛೇರಿಗೆ ಹೋಗಿರುತ್ತೇವೆ. ವಕೀಲರ ಕಛೇರಿಗೆ ಹೋದಾಗ ಬೆಳಗ್ಗೆ 10.00-11.00 ಗಂಟೆಯಾಗಿರುತ್ತದೆ. ಸದರಿ ವಕೀಲರ ಹೆಸರು ನನಗೆ ಗೊತ್ತಿಲ್ಲ, ಅವರ ಕಛೇರಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ.

3. ರಾಜುರವರು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ.1 ನೇ ಪ್ರತಿವಾದಿ ರಾಜುರವರು ಕ್ರಯದ ಕರಾರು  ಆಗುವ ಸಮಯದಲ್ಲಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ರಾಜುರವರು ಆ ಸಮಯದಲ್ಲಿ  ಡಿ ವೈ ಎಸ್ ಪಿ ರವರ ಕಛೇರಿ  ಮಾನವ ಹಕ್ಕುಗಳ ಆಯೋಗ, ಬಹು ಮಹಡಿ ಕಟ್ಟಡ ಬೆಂಗಳೂರಿನಲ್ಲಿ ಹೆಚ್ ಸಿ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರು ಪ್ರತೀನಿತ್ಯ 10 ಗಂಟೆಯ ಒಳಗೆ ಕರ್ತವ್ಯಕ್ಕೆ ಹಾಜರು ಇರಬೇಕು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರು ಬೆಳಗ್ಗೆ 10.00-ಸಂಜೆ 5.30 ಗಂಟೆಯವರೆಗೆ ಕೆಲಸ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದಂತಹ ವ್ಯಾಪಾರದ ದಿನ ಮತ್ತು ಕರಾರು ಪತ್ರದ ದಿನಗಳಲ್ಲಿ ಅವರು ಕರ್ತವ್ಯಕ್ಕೆ ರಜೆ ಹಾಕಿರಲಿಲ್ಲ ಕರ್ತವ್ಯಕ್ಕೆ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರ ಆದ ದಿನವೇ ಚೆಕ್ ಅನ್ನು ಕೊಟ್ಟಿರುತ್ತಾರೆ ಕರಾರು ಪತ್ರ ಆದ ದಿನ 1 ನೇ ಪ್ರತಿವಾದಿಯವರಿಗೆ ಯಾವುದೇ ಚೆಕ್ ಅನ್ನು ನೀಡಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತಾರೆಂದರೆ ನುಡಿಯುತ್ತಾರೆ. ಸದರಿ ಕ್ರಯದ ಕರಾರು ಪತ್ರ ನನ್ನ ಮೇಲ್ವಿಚಾರಣೆಯಲ್ಲಿ ಮತ್ತು ನನ್ನ ಅಭಿಪ್ರಾಯದಲ್ಲಿ ಆಗಿಲ್ಲ ಆದರೆ 1 ನೇ ಪ್ರತಿವಾದಿ ಮತ್ತು ವಾದಿಯವರು ಮಾಡಿಕೊಂಡಿರುತ್ತಾರೆ ನಾನು ಸಹಿ ಹಾಕಿರುತ್ತೇನೆ. ಸದರಿ ಕರಾರು ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ ಸದರಿ ಕರಾರು ಪತ್ರಕ್ಕೆ ವಾದಿಯವರು ಮತ್ತು  ಪ್ರತಿವಾದಿಯವರು ಸಹಿ ಹಾಕಿದ ನಂತರ ನಾನು ಸಹಿ ಹಾಕಿರುತ್ತೇನೆ. ಈ ಮೇಲೆ ಹೇಳಿದ ಇಷ್ಟು ಜನ ಎಲ್ಲರುಾ ಸಹಿಗಳನ್ನು 1 ನೇ ಪ್ರತಿವಾದಿಯವರ ಮನೆಯಲ್ಲಿ ಹಾಕಿರುತ್ತಾರೆ.  ವಾದಿಯವರು ಸದರಿ ಕ್ರಯದ

ಕರಾರು ಪತ್ರ ವನ್ನು ಮಾಡಿಕೊಳ್ಳುವ ಮೊದಲು ಯಾವುದೇ ವಕೀಲರ ಕಾನೂನು ಸಲಹೆಯನ್ನು ಪಡೆದುಕೊಂಡಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಆತ್ಮೀಯರಾಗಿರುವುದರಿಂದ 1 ನೇ ಪ್ರತಿವಾದಿ ನನ್ನ ಬಳಿ 3 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಕೇಳಿರುತ್ತಾರೆಂದರೆ ಸರಿಯಲ್ಲ. ಆಗ ನಾನು ನನ್ನ ಬಳಿ ಹಣ ಇಲ್ಲ ನಮ್ಮ ಬೀಗರಿಂದ ಹಣ ಕೊಡಿಸುತ್ತೇನೆಂದು ನಂಬಿಸಿರುತ್ತೇನೆಂದರೆ ಸುಳ್ಳು. ಸದರಿ ಹಣಕ್ಕೆ ಭದ್ರತೆಯನ್ನು ಬರೆದುಕೊಡಬೇಕು ಎಂದು 1 ನೇ ಪ್ರತಿವಾದಿಗೆ ಹೇಳಿರುತ್ತೇನೇಂದರೆ ಸರಿಯಲ್ಲ. ಅದೇ ಪ್ರಕಾರವಾಗಿ ನಾನು ಮತ್ತು ನನ್ನ ಬೀಗರಾದ ವಾದಿಯವರು ಕರಾರು ಪತ್ರ ವನ್ನು ಬರೆಸಿಕೊಂಡು ಬಂದು 1 ನೇ ಪ್ರತಿವಾದಿಯಿಂದ ಸಹಿಯನ್ನು ಪಡೆಯಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸದರಿ ದಾಖಲೆ ಕರಾರು ಪತ್ರ ಆಗಿರುವುದರಿಂದ ತಾನು ಸಹಿ ಹಾಕುವುದಿಲ್ಲ ಎಂದು ಹೇಳಿದಾಗ ನಾನು ಮತ್ತು ಪುಟ್ಟಗಿರಿಗೌಡರವರು ಅವರ ಮೇಲೆ ಒತ್ತಡ ಹಾಕಿ, ಅವರನ್ನು ನಂಬಿಸಿ ಅವರ ಸಹಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಈ ವ್ಯವಹಾರ ಬೇಡ ನಾನು ಸಹಿ ಹಾಕುವುದಿಲ್ಲ ಎಂದು ಹೇಳಿದಾಗ ಸದರಿ ಕರಾರು ಪತ್ರದ 5 ದಿನಗಳ ನಂತರ 1 ನೇ ಪ್ರತಿವಾದಿಯ ಬ್ಯಾಂಕ್ ಖಾತೆಗೆ ಹಣವನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿಯವರಿಂದ ಯಾವುದೇ ಚೆಕ್ ಅನ್ನು ಪಡೆದುಕೊಂಡಿಲ್ಲ ಮತ್ತು ಅದನ್ನು ನಗದೀಕರಣಕ್ಕಾಗಿ ಚೆಕ್ ಅನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಸದರಿ 10 ಸಾವಿರ ರೂಪಾಯಿ ಹಣವನ್ನು 1 ನೇ ಪ್ರತಿವಾದಿಯವರು ತೆಗೆದುಕೊಂಡಿಲ್ಲ ಅದನ್ನು ನಾವೇ 1 ನೇ ಪ್ರತಿವಾದಿಯವರ ಮನೆಯಲ್ಲಿ ಇಟ್ಟು ಹೊರಟು ಹೋಗಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಭಾಮೈದರವರ ಸಹಿಯನ್ನು ಸದರಿ ಕರಾರು ಪತ್ರಕ್ಕೆ ಪಡೆದುಕೊಂಡಿಲ್ಲ. ಸದರಿ ಸ್ವತ್ತು 1 ನೇ ಪ್ರತಿವಾದಿಯವರ ಪಿತ್ರಾರ್ಜಿತ ಸ್ವತ್ತು ಆಗಿದ್ದರಿಂದ ಅದನ್ನು ಅವರಿಗೆ ಒಬ್ಬರಿಗೆ ಮಾರಾಟ ಮಾಡುವ ಅಧಿಕಾರ ಇಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಇಬ್ಬರು ಹೆಣ್ಣು ಮಕ್ಕಳು ನಿಪಿ-1 ರ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಹೌದು. 1 ನೇ ಪ್ರತಿವಾದಿ ಯಾವತ್ತೂ ತನ್ನ ಜಮೀನನ್ನು ಮಾರಾಟ ಮಾಡುತ್ತೇನೆಂದು ಒಪ್ಪಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು 2 ನೇ ಸಾಕ್ಷಿ ಸದರಿ ಸ್ವತ್ತು ಊರ ಮುಂದಿನ ಸ್ವತ್ತಾಗಿರುವುದರಿಂದ ಮತ್ತು ಬೆಲೆ ಬಾಳುವ ಸ್ವತ್ತಾಗಿರುವುದರಿಂದ ಅದನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸುಳ್ಳು ದಾಖಲೆಗೆ ಅನುಕೂಲವಾಗಿಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಪ್ರತಿವಾದಿಯವರ ಪರ ವಕೀಲರಿಂದಃ</u>

ಈ ಮೇಲೆ 2 ರಿಂದ 4 ನೇ ಪ್ರತಿವಾದಿಯವರ ಪರ ವಕೀಲರು ನಡೆಸಿದ ಪಾಟೀ ಸವಾಲನ್ನು 1 ನೇ ಪ್ರತಿವಾದಿಯವರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.